ಕರ್ನಾಟಕ ಸರ್ಕಾರ

(ಅರಣ್ಯ ಇಲಾಖೆ)

ಸಂಖ್ಯೆ:ಡಿ5/ಆಲೆಪ/ಪಿಎಸ್‌ಡಿ/ಸಿಆರ್-16/2017-18

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ
ಅರಣ್ಯ ಭವನ. ಮಲ್ಲೇಶ್ವರಂ,
ಬೆಂಗಳೂರು-560003, ದಿನಾಂಕ:24-10-2017

## ಸುತ್ತೋಲೆ

ವಿಷಯ:- ಟೆಂಡರ್ ಗುತ್ತಿಗೆದಾರರಿಂದ 5% ಭದ್ರತಾ ಠೇವಣಿಹಾಗೂ Unbalance Tender ಗೆ ಹೆಚ್ಚುವರಿ ಭದ್ರತಾ ಠೇವಣಿ ಪಡೆಯದೆ ಕರಾರು ಮಾಡಿ ಕೆಲಸ ವಹಿಸಿರುವ ಲೋಪಗಳ ಬಗ್ಗೆ.

ಉಲ್ಲೇಖ:-
1. ಕೆ.ಟಿ.ಪಿ.ಪಿ ಕಾಯ್ದೆ 1999 ಸೆಕ್ಷನ್ 4(ಇ) ಮತ್ತು 6
2. ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 4 ಪಿಸಿಎಲ್ 2008 ದಿನಾಂಕ14.10.2008

***

ಉಲ್ಲೇಖ (1) ರಲ್ಲಿ ರೂ.1.00 ಲಕ್ಷ ಮೀರಿದ ಕೆಲಸಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ 1999ರ ಸೆಕ್ಷನ್ 4(ಎ) ಪ್ರಕಾರ ಟೆಂಡರ್ ಮಾಡಬೇಕೆಂದು ನಿಯಮವಿದೆ.

ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ಟೆಂಡರ್‌ಗಳನ್ನು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ಮೂಲಕವೇ ಪ್ರಕ್ರಿಯೆಗೊಳಿಸಿ ಟೆಂಡರ್ ಮೊತ್ತದ 5% ನ್ನು ಭದ್ರತಾ ಠೇವಣಿಯಾಗಿಯೂ ಕಡಿಮೆ ದರ ಸೂಚಿಸಿದ್ದರೆ (Unbalance Tender)ವ್ಯತ್ಯಾಸದ ಮೊತ್ತವನ್ನು ಹೆಚ್ಚುವರಿ ಭದ್ರತಾ ಠೇವಣಿಯನ್ನಾಗಿಯೂ ಪಡೆದ ನಂತರವೇ ಗುತ್ತಿಗೆದಾರರಿಗೆ ಕರಾರು ಮಾಡತಕ್ಕದ್ದಾಗಿದೆ.

ಆದರೆ ಆಂತರಿಕ ಲೆಕ್ಕ ಪರಿಶೋಧನಾ ಸಮಯದಲ್ಲಿ ಕೆಲವೊಂದು ವಿಭಾಗಗಳಲ್ಲಿ ಭದ್ರತಾ ಠೇವಣಿಹಾಗೂ ಹೆಚ್ಚುವರಿ ಭದ್ರತಾ ಠೇವಣಿ ಪಡೆಯದೆ ಗುತ್ತಿಗೆದಾರರಿಗೆ ಟೆಂಡರ್ ಕರಾರು ಮಾಡಿ ಕಾಮಗಾರಿ ಅನುಷ್ಠಾನಗೊಳಿಸಿರುವುದು ಕಂಡುಬಂದಿದ್ದು, ಇದರಿಂದ ಗುತ್ತಿಗೆದಾರರಿಗೆ ಪರೋಕ್ಷವಾಗಿ ಲಾಭ ಮಾಡಿಕೊಡುವುದಲ್ಲದೆ ಕೆ.ಟಿ.ಪಿ.ಪಿ. ನಿಯಮಗಳ ಉಲ್ಲಂಘನೆಯಾಗಿರುವುದು ಕಂಡುಬಂದಿದೆ.

ಈ ಉಲ್ಲಂಘನೆಯು ಕೆ.ಟಿ.ಪಿ.ಪಿ. 1999 ರ ಸೆಕ್ಷನ್ 23ರ ಪ್ರಕಾರ ದಂಡನೆಗೆ ಒಳಪಡುತ್ತದೆ.

ಆದ್ದರಿಂದ ಎಲ್ಲಾ ಟಂಡರ್ ಕರೆಯುವ ಪ್ರಾಧಿಕಾರಗಳು ಹಾಗೂ ಅಂಗೀಕರಿಸುವ ಪ್ರಾಧಿಕಾರಿಗಳು ಇದನ್ನು ಗಮನದಲ್ಲಿರಿಸಿಕೊಂಡು ಎಚ್ಚರಿಕೆಯಿಂದ ಟೆಂಡರ್ ಕರಾರು ಮಾಡುವಂತೆ ಸೂಚಿಸಿದೆ.ತಪ್ಪಿದಲ್ಲಿ ಸೆಕ್ಷನ್ 23 ರ ದಂಡನೆಗೆ ಶಿಫಾರಸ್ಸು ಮಾಡಲಾಗುವುದೆಂದು ಸೂಚಿಸಿದೆ

24/10/17

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು

ಇವರಿಗೆ,

1) ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2) ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ. ICT
3) ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ), ವನ್ಯಜೀವಿ, ಅರಣ್ಯ ಸಂಚಾರಿದಳ, ತರಬೇತಿ ಘಟಕ ಗಳವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

Aradhya